**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 735/2023**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ.06**

**ದಿನಾಂಕಃ 13.03.2025** **ಸಿಡಬ್ಲ್ಯೂ.19**

| | |
|---|---|
| ಹೆಸರು | ಬಸವರಾಜ ಎನ್ ಹೆಚ್ |
| ತಂದೆ ಹೆಸರು | ಹಾಲಪ್ಪ |
| ವಯಸ್ಸು | 54 ವರ್ಷ |
| ಉದ್ಯೋಗ | ಎ ಎಸ್ ಐ |
| ವಾಸ ಸ್ಥಳ | ಶಾಮನೂರು |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ಜನವರಿ 2022 ರಿಂದ 2024 ರವರೆಗೆ ಮಲೆಬೆನ್ನೂರು ಠಾಣೆಯಲ್ಲಿ ಎ ಎಸ್ ಐ ಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 21.01.2023 ರಂದು ಮದ್ಯಾಹ್ನ 2.30 ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ.1 ರವರು ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರನ್ನು ಸ್ವೀಕರಿಸಿ ಠಾಣಾ ಗುನ್ನೆ 11/2023 ರಂತೆ ಪ್ರಕರಣ ದಾಖಲಿಸಿಕೊಂಡು ಪ್ರ ವ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ಗುರುತಿಸಿದ ದೂರನ್ನು ಈಗಾಗಲೇ ನಿಪಿ.1 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಗುರುತಿಸಿದ ಪ್ರ ವ ವರದಿಯನ್ನು ನಿಪಿ. 9 ಎಂದು ಸಾಕ್ಷಿಯ ಸಹಿಯನ್ನು ನಿಪಿ.9 (ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ.17 ರವರೊಂದಿಗೆ ದಾವಣಗೆರೆ ಸಿಜೆ ಆಸ್ಪತ್ರೆಗೆ ತೆರಳಿ ಚಾಸಾ.4 ಮತ್ತು 5 ರವರಿಗೆ ನೋಟಿಸ ನೀಡಿ ಮೃತ ವಿಜಯಕುಮಾರ ರವರ ಮೃತದೇಹದ ಶವಪಂಚನಾಮೆಯನ್ನು ಸಂಜೆ 4.00 ರಿಂದ 6.00 ರವರೆಗೆ ಜರುಗಿಸಿರುತ್ತೇವೆ. ಸಾಕ್ಷಿಯು ಗುರುತಿಸಿದ ನೋಟಿಸನ್ನು ನಿಪಿ. 10 ಎಂದು ಸಾಕ್ಷಿಯ ಸಹಿಯನ್ನು ನಿಪಿ.10 (ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಗುರುತಿಸಿದ ಶವ ತನಿಖಾ ವರದಿಯನ್ನು ನಿಪಿ. 11 ಎಂದು ಸಾಕ್ಷಿಯ ಸಹಿಯನ್ನು ನಿಪಿ.11 (ಎ) ಎಂದು ಗುರುತಿಸಲಾಯಿತು. ಸದರಿ ಕಾಲಕ್ಕೆ ಛಾಯ ಚಿತ್ರ ತೆಗೆದಿದ್ದು ಅದನ್ನು ನಿಪಿ.12 ಎಂದು ಗುರುತಿಸಲಾಯಿತು. ನಂತರ ಮೃತ ದೇಹವನ್ನು ಸಂಬಂದಿಕರಿಗೆ ಒದಗಿಸಿ ರಶೀದಿ ಪಡೆದಿರುತ್ತೇನೆ. ಸಾಕ್ಷಿಯು ಗುರುತಿಸಿದ ರಶೀದಿಯನ್ನು ನಿಪಿ. 13 ಎಂದು ಸಾಕ್ಷಿಯ ಸಹಿಯನ್ನು ನಿಪಿ.13 (ಎ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಚಾಸಾ. 6 ರಿಂದ 8 ರವರ ಹೇಳಿಕೆ ಪಡೆದಿರುತ್ತೇನೆ.

ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ.20 ರವರಿಗೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಜಿ ಕೆ ಎನ್ ವಕೀಲರಿಂದಃ**

ಘಟನಾ ಸ್ಥಳ ಮತ್ತು ಠಾಣೆಗೆ 2 ಕಿ ಮೀ ಅಂತರವಿದೆ. ಚಾಸಾ.1 ರವರು ನಿಪಿ 1 ನ್ನು ಎಲ್ಲಿ ಬೆರಳಚ್ಚು ಪಡಿಸಿಕೊಂಡು ಬಂದಿದ್ದರು ಎಂದು ನಾನು ವಿಚಾರಿಸಿಲ್ಲ. ಚಾಸಾ.1 ರವರು ನಿಪಿ.1 ನ್ನು ಠಾಣೆಗೆ ಬರುವಾಗ ಬೆರಳಚ್ಚು ಪಡಿಸಿಕೊಂಡು ಬಂದಿದ್ದರು. ದೂರು ನೀಡುವ ಕಾಲಕ್ಕೆ ಚಾಸಾ.1 ರವರನ್ನು ಹರೀಶ ರವರ ಬಗ್ಗೆ ವಿಚಾರಣೆ ಮಾಡಿಲ್ಲ. ಚಾಸಾ.4 ಮತ್ತು 5 ಮೃತನ ಸಂಬಂದಿಕರಲ್ಲ. ಮೃತನ ಕುಟುಂಬಕ್ಕೆ ಪರಿಹಾರ ಧನ ಸಿಗಲಿ ಎಂದು ಸುಳ್ಳು ದೂರು ದಾಖಲಿಸಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಹರಿಹರ